ಅಲ್ಲಿಗೇ ತಡೆದು ಹೇಳಿದಳು: "ಅವಳ ಜೊತೆ ನನ್ನನ್ನು ಹೋಲಿಸೋದಾ? ಮೊದಲೇ ಹೇಳಬೇಕಾದ ಮಾತು ಅಂದರೆ 'ಅವರು' ಅವರಾಗಿದ್ದರು.''

ಹೆಂಡತಿಯ ಬಾಯಿಂದ ಬರುತ್ತಿದ್ದ ಮಾತನ್ನು ಮಧ್ಯದಲ್ಲೇ ತುಂಡರಿಸುತ್ತ ಬರ್ತೊಲಿನೊ – "ಅವರು ಆಗ ಮುದುಕರಾಗಿರಲಿಲ್ಲ, ಇದನ್ನೇ ತಾನೆ ನೀನು ಹೇಳಬೇಕು ಅಂತ ಇದ್ದದ್ದು?" ಎಂದನು.

"ಅದಷ್ಟೇ ಅಲ್ಲ... ನಾನೂ ಅತ್ತಿರಲಿಲ್ಲವೇನು? ಹೌದು, ಅತ್ತಿದ್ದೆ. ಎಷ್ಟು ಅತ್ತಿದ್ದೆ... ಆದರೆ ಕೊನೆಯವರೆಗೂ ನನ್ನನ್ನು ನಾನು ಸಂಭಾಳಿಸಿಕೊಂಡಿದ್ದೆ. ಆದರೆ ಅರ್ತೆನ್ಸಿಯಾ ಮಾಡುತ್ತಾ ಇರೋದು ಏನು? ಬರೀ ಅಳುತ್ತಾ ಇದ್ದಾಳೆ ಮತ್ತು ಇಡೀ ಜೀವನ ಪರ್ಯಂತ ಅಳುತ್ತಲೇ ಇರುತ್ತಾಳೇನೋ ಎನ್ನುವ ಹಾಗೆ ಅಳುತ್ತಾ ಇದ್ದಾಳೆ. ನನಗೆಲ್ಲ ಗೊತ್ತಿದೆ. ಇದೆಲ್ಲ ಬರೀ ತೋರಿಕೆಯ ಅಳು ಎನ್ನುವುದು ನನಗೆಲ್ಲ ಗೊತ್ತು."

ತೋರಿಕೆ! ಸಾಧ್ಯವೇ ಇಲ್ಲ! ಲೀನಾಳ ಮಾತು ಕೇಳುತ್ತಿದ್ದಂತೆಯೇ ಬರ್ತೊಲಿನೋ ಸಿಟ್ಟು ನೆತ್ತಿಗೇರಿತು. ಅವನಿಗೆ ತನ್ನ ಹೆಂಡತಿಯ ಮೇಲೆ ಎಷ್ಟು ಕೋಪ ಬಂದಿತೋ ಅದಕ್ಕಿಂತಲೂ ಹೆಚ್ಚು ಕೋಪ ಅವಳ ಗತಿಸಿದ ಗಂಡ ಆ ಸಿನೋರ್ ತಾದ್ದೇಯಿ ಮೇಲೆ ಬಂತು. ಆ ಮನುಷ್ಯ ಇಲ್ಲಿಯವರೆಗೂ

